ಸಿಸಿ 351/2016 ಪಿ.ಡಬ್ಲ್ಯೂ 1

<u>ದಿನಾಂಕ 14-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ .ಆರ್.ಎಸ್ ವಕೀಲರಿಂದಃ</u>**

ನಿಪಿ1 ರ ದೂರನ್ನು ನಮ್ಮ ಗ್ರಾಮದವರು ಬರೆದಿದ್ದು ಅವರ ಹೆಸರು ಗೊತ್ತಿಲ್ಲ. ಆತ ಸ್ವಲ್ಪ ದಿನಗಳಿಂದ ಪರಿಚಯ ಇದ್ದು ನನ್ನ ಯಜಮಾನರಿಗೆ ಗೊತ್ತಿರುತ್ತಾರೆ. ನಮ್ಮ ಮತ್ತು ಆರೋಪಿಗಳ ಕುಟುಂಬದ ನಡುವೆ ನಿವೇಶದ ವಿಚಾರವಾಗಿ ವ್ಯಾಜ್ಯ ಇದೆ ಎಂದರೆ ಹೌದು. ನಿಪಿ1 ರ ದೂರಿನ ಒಕ್ಕಣೆಗಳನ್ನು ನನ್ನ ಗಂಡ ಹೇಳಿ ಬರೆಸಿದ್ದು ನಾನು ಸಹಿ ಮಾತ್ರ ಮಾಡಿರುತ್ತೇನೆ. ಅದರಲ್ಲಿ ಹೇಳಿರುವ ಕೇಸಿನ ಬಗ್ಗೆ ಗೊತ್ತಿಲ್ಲ. ಅದರಲ್ಲಿ ಹೇಳಿರುವ ಯಾವುದೇ ವಿಚಾರಗಳು ಗೊತ್ತಿಲ್ಲ. ಆರೋಪಿಗಳು ಹಾಕಿದ್ದ ತಳಪಾಯದ

ಮೇಲೆ ಬಾಗಿಲಿನ ನಿಲ ಅಳವಡಿಸುತ್ತಿದ್ದರು ಎಂದರೆ ಹೌದು. ಅವರು ಬಾಗಿಲು ನಿಲಿಸುತ್ತಿದ್ದ ಸ್ದಳಕ್ಕೂ ಯಾವುದೇ ಸಂಬಂದ ಇಲ್ಲ . ಅವರು ಒತ್ತುವರಿ ಮಾಡಿ ತಳಪಾಯ ಹಾಕಿದ್ದಾರೆ. ಅವರು ನಮಗೆ ಸೇರಿದ ಜಾಗವನ್ನು ಆಕ್ರಮಿಸಿಲ್ಲ. ನನ್ನ ಗಂಡ ಸಿವಿಲ್ ದಾವೆ ಸಲ್ಲಿಸಿದ್ದಾಗಿನಿಂದಲೂ ನಮಗೂ ಆರೋಪಿಗಳಿಗೂ ವೈ ಮನಸ್ಸು ಇದೆ ಎಂದರೆ ಹೌದು.

ಗಲಾಟೆ ನಡೆದಾಗ ಸುಮಾರು 20 ಜನ ಸೇರಿದ್ದರು. ಅವರೆಲ್ಲರು ನಮ್ಮ ಗ್ರಾಮದರು . ಅವರ ಪರಿಚಯ ಇದೆ. ಸ್ದಳದಲ್ಲಿ ಇದ್ದವರ ಬಗ್ಗೆ ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ನೀಡಿದ್ದೇನೆ. ಆರೋಪಿಗಳು ಅಲ್ಲದೇ ಸ್ದಳದಲ್ಲಿ ಸೌಮ್ಯ , ಕೆಂಪಮ್ಮ , ಸವಿತ , ಗುರು ಮತ್ತು ಇತರರು ಇದ್ದು ಅವರುಗಳ ಹೆಸರು ಗೊತ್ತಿಲ್ಲ. ಗಲಾಟೆ ಬೆಳಗ್ಗೆ 10-10 ರಿಂದ 12-13 ರ ವರಗೆ ನಡೆದಿರುತ್ತದೆ. ಆರೋಪಿಗಳು ನನ್ನ ಗಂಡನಿಗೆ ಹಲ್ಲೆ ಮಾಡಿದಾಗ ಅವರಿಗೆ ರಕ್ತಗಾಯವಾಗಿರುತ್ತದೆ. ಆತನ ಬಟ್ಟೆ ರಕ್ತದ ಕಲೆಯಾಗಿತ್ತು . ರಕ್ತ ಕಲೆಯಾದ ಬಟ್ಟೆಯನ್ನು ಪೋಲಿಸರಿಗೆ ನೀಡಿಲ್ಲ ಆದರೆ ತೋರಿಸಿರುತ್ತೇನೆ. ಆಸ್ಪತ್ರೆ ಮಧ್ಯಾಹ್ನ 12-30 ಕ್ಕೆ ನಾನು ಮತ್ತು ನನ್ನ ಗಂಡ , ನನ್ನ ಮೈದುನ ಪ್ರಕಾಶ ಹೋಗಿರುತ್ತೇವೆ. ಅರಕೆರೆ ಆಸ್ಪತ್ರೆಗೆ 12-40 ಕ್ಕೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಗಲಾಟೆ ಬಗ್ಗೆ ಹೇಳಿರುತ್ತೇನೆ. ಆಸ್ಪತ್ರೆಯಲ್ಲಿ ಮಧ್ಯಾಹ್ನ 2-00 ಗಂಟೆಯವರಗೆ ಇದ್ದು ಆನಂತರ ಮಂಡ್ಯ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಯಜಮಾನರು ಒಳರೋಗಿಯಾಗಿ 3 ದಿನ ದಾಖಲಾಗಿರುತ್ತಾರೆ . ನಾನು ಸಹಾ ಅವರೊಂದಿಗೆ ಆಸ್ಪತ್ರೆಯಲ್ಲಿ ಇದ್ದೆ. ನಾನು ಆ 3 ದಿನಗಳ ಅವದಿಯಲ್ಲಿ ಗ್ರಾಮಕ್ಕೆ ಬಂದಿರುವುದಿಲ್ಲ.

ನಾನು ಆ ದಿನ ಹಸಿರು ಬಣ್ಣದ ನೈಟಿ ಧರಿಸಿದ್ದೆ . ಅದು ಅದರ ಭಜದ ಹತ್ತಿರ ಮತ್ತು ಮುಂಭಾಗದಲ್ಲಿ ಹರಿದಿರುತ್ತದೆ. ಸೈಟಿನ ವಿಚಾರವಾಗಿ ನನ್ನ ಗಂಡ ಓ.ಎಸ್

441/2015 ರಂತೆ ದಾವೆ ಸಲ್ಲಿಸಿದ್ದು, ಕೆಂಪಮ್ಮ ನವರು  ನನ್ನ ಗಂಡ ಚಾಸಾ 2 ರವರ ವಿರುದ್ದ ದಾವಾ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ.  ಆರೋಪಿಗಳ ತಾಯಿ ಕೆಂಪಮ್ಮನವರು ಮನೆ ಕಟ್ಟಿಕೊಳ್ಳಲು ಸದರಿ ದಾವೆಯಲ್ಲಿ ಆದೇಶವಾಗಿರುತ್ತದೆ ಎಂದರೆ ಹೌದು.  ಸೈಟಿನ ವಿಚಾರವಾಗಿ ವ್ಯಾಜ್ಯ ಇರುವುದರಿಂದ ನಾನು ಮತ್ತು ನನ್ನ ಗಂಡ ಸೇರಿ ಸುಳ್ಳು ಪಿರ್ಯಾದಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ಮುಂದುವರೆದ ಹೇಳಿಕೆಯಲ್ಲಿ ನಾನು ದುರು ನೀಡುವ ಸಮಯದಲ್ಲಿ ಗಾಬರಿಯಲ್ಲಿ ಈ ಕೃತ್ಯವು ದಿಃ 25-09-2015 ರಂದು ಬೆಳಗ್ಗೆ 10-30 ಗಂಟೆಗೆ ನಡೆದಿರುತ್ತದೆ ಎಂದು ಹಾಗೂ ಸುಂದರೇಶನು ನನ್ನ ಕತ್ತಿನಲ್ಲಿ ಇದ್ದ ......................... ಈ  ಕೃತ್ಯಕ್ಕೂ ಹೆಚ್.ಕೆ ರವಿ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನಾನು ನನ್ನ ಮುಂದುವೆರೆದ ಹೇಳಿಕೆಯಲ್ಲಿ ಹೇಳಿರುವುದಿಲ್ಲ.  ಸಾಕ್ಷ್ಯಿಯ ಸದರಿ ಹೇಳಿಕೆಯ ನಿರಾಕರಿಸಿದ ಭಾಗವನ್ನು ನಿಡಿ1 ಎಂದು ಗುರುತಿಸಲಾಯಿತು.  ಮೂ. ಮಾ 1 ರಿಂದ 3 ರ ಬಗ್ಗೆ ನಾನು ಯಾವುದೇ ಪ್ರತ್ಯೇಕ ಗುರುತು ಮಾಡಿಕೊಂಡಿಲ್ಲ.  ಮೂ. ಮಾ 1 ರಿಂದ 3 ಸಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಹೌದು. ಆದರೆ ಮೂ.ಮಾ 3 ರ ನೈಟಿಯನ್ನು ಆ ದಿನ ಧರಿಸಿದ್ದೇ ಎಂದು ನುಡಿಯುತ್ತಾರೆ. ನಾನು ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸುಳ್ಳುದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿಗಳು ಯಾವುದೇ ಗಲಾಟೆ ಮಾಡಿಲ್ಲ ,  ಅವಮಾನ ಪಡಿಸಿಲ್ಲ ಮತ್ತು  ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸುಳ್ಳು .

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಪ್ರಧಾನ ಸಿಜೆ, ಶ್ರೀರಂಗಪಟ್ಟಣ

(ಈ ಹಂತದಲ್ಲಿ 1 ರಿಂದ 4 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು).